**ಅಮಲು ಜಾರಿ ಸಂಖ್ಯೆ: 13/2023**
**ಆರ್.ಡಬ್ಲ್ಯೂ -01**

ದಿನಾಂಕಃ **17-03-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು :-** ಡಿ.ಹೆಚ್.ಆರ್. ಪರ ಶ್ರೀ. **ಕೆ.ಎಸ್.ಎಲ್.** ವಕೀಲರಿಂದ :-

ಲಲಿತಮ್ಮ ನವರು ಯಾವ ಕಾರಣಕ್ಕಾಗಿ ಅರ್ಜಿ ಸಲ್ಲಿಸಿರುತ್ತಾರೆಂದು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ತಿಳಿದುಕೊಂಡಿರುತ್ತೇನೆಂದು ನುಡಿಯುತ್ತಾರೆ. ಸರ್ವೆ ನಂಬರ್-12/2 ಹಾಗೂ ಸರ್ವೆ ನಂಬರ್-28/1 ಎರಡು ಸಹ ಲಲಿತಮ್ಮನವರಿಗೆ ಅವರ ತಾಯಿಯಿಂದ ಬಂದಿರುವ ಸ್ವತ್ತುಗಳು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಸದರಿ ಲಲಿತಮ್ಮ ಮತ್ತು ಪುಟ್ಟಮ್ಮ ನವರಿಗೆ ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ತೊಂದರೆ ಕೊಟ್ಟಿದ್ದರಿಂದ ಅವರು ಅಸಲು ದಾವ 102/1997 ರಂತೆ ನಿಮ್ಮ ವಿರುದ್ದ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂಬರ್-12/2 ಮತ್ತು 28/1 ರಲ್ಲಿ ಲಲಿತಮ್ಮ ಮತ್ತು ಪುಟ್ಟಮ್ಮ ರವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿ ಸುಳ್ಳು ನಾನೇ ಇದ್ದೇನೆಂದು ನುಡಿಯುತ್ತಾರೆ.

2. ನೀವು ಸದರಿ ಅಸಲು ದಾವ 102/1997 ರಂತೆ ಸಲ್ಲಿಸಿರುವ ಆರ್.ಎ-239/2014 ಹಾಗೂ ಆರ್.ಎಸ್.ಎ-711/2022 ಎರಡು ವಜಾ ಆಗಿರುತ್ತದೆಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಲಲಿತಮ್ಮನವರು ಹೊನ್ನರಾಯನ ಹಳ್ಳಿಯಲ್ಲಿ ವಾಸ ಇದ್ದಾರೆಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ರಂಗೇನಹಳ್ಳಿಯಲ್ಲಿ ವಾಸ ಇದ್ದೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಲಲಿತಮ್ಮನವರು ದೂರ ಇರುವುದನ್ನು ದುರುಪಯೋಗ ಪಡಿಸಿಕೊಂಡು ನೀವು ದಾವ ಸ್ವತ್ತುಗಳಲ್ಲಿ ಅತಿಕ್ರಮಣ ಪ್ರವೇಶ ಮಾಡಲು ಪ್ರಯತ್ನಿಸಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣಪತ್ರಿಕೆಯಲ್ಲಿ ದಾವ ಸ್ವತ್ತುಗಳ ಚಕ್ಕುಬಂದಿ ಸರಿ ಇರುವುದಿಲ್ಲ ಎಂದು ಹೇಳಿದ್ದು ಈ ಸಂಬಂಧ ನೀವು ಈ ಹಿಂದೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿ ಮರೆತಿರುತ್ತೇನೆಂದು ನುಡಿಯುತ್ತಾರೆ. ದಾವ ಸ್ವತ್ತುಗಳು ಲಲಿತಮ್ಮನವರಿಗೆ ಸೇರಿದ್ದು ನೀವು ಅವರಿಗೆ ತೊಂದರೆ ಕೊಡಲು ಸುಳ್ಳು ಪ್ರಮಾಣಪತ್ರಿಕೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,

ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.
ಮಾಗಡಿ.